ಅಸಲು ದಾವೆ ಸಂ: 52/2021

ಪಿ.ಡಬ್ಲ್ಯು–1

**ದಿ: 22.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 1 ಮತ್ತು 2 ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ ಹೆಚ್.ಎನ್. ರವರಿಂದ :**

ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ಈ ಪ್ರಕರಣದಲ್ಲಿ ನಾನು ಸಾಕ್ಷದ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ.. ನನ್ನ ಸಾಕ್ಷದ ಪ್ರಮಾಣ ಪತ್ರವು ಕನ್ನಡ ಭಾಷೆಯಲ್ಲಿರುತ್ತದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುತ್ತವೆ.. ಈ ದಾವೆಯನ್ನು ಬಸವರಾಜ ಸಲ್ಲಿಸಿರುತ್ತಾನೆ. ಆತನು ಪಂಪಣ್ಣ ಮತ್ತು ಶಿವಕುಮಾರರವರ ವಿರುದ್ಧ ಸಲ್ಲಿಸಿರುತ್ತಾನೆ. ಬಸವರಾಜ ಈತನು ಹೊಲದ ಸಲುವಾಗಿ ದಾವೆಯನ್ನು ಸಲ್ಲಿಸಿರುತ್ತಾನೆ. ದಾವಾ ಆಸ್ತಿಯ ಸರ್ವೆ ನಂ. 10 ಇರುತ್ತದೆ. ಸರ್ವೆ ನಂ. 10 ರಲ್ಲಿ 13 ಎಕರೆ 33 ಗುಂಟೆ ಜಮೀನು ಇರುತ್ತದೆ. ಸರ್ವೆ ನಂ. 10 ರ ಪೂರ್ವಕ್ಕೆ ಹನುಮಂತ ಬಸವರಾಜ ರವರ ಜಮೀನು ಬರುತ್ತದೆ. ಪಶ್ಚಿಮಕ್ಕೆ ಬೆಂಡೋಣಿ ಅಯ್ಯಪ್ಪ ನ ಜಮೀನು ಬರುತ್ತದೆ. ಉತ್ತರಕ್ಕೆ ಚನ್ನಪ್ಪ ಬೆನಕಪ್ಪ ರವರ ಜಮೀನು ಇರುತ್ತದೆ. ದಕ್ಷಿಣಕ್ಕೆ ದಾರಿ ಇರುತ್ತದೆ.

ಈ ಹಂತದಲ್ಲಿ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ